ಯಶ್ವಂತರವರು ಬೆಳ್ಳಂಬೆಳಿಗ್ಗೆ ಯಾವಾಗ ವಾಕಿಂಗ್ ಮುಗಿಸಿ ಬಂದರೂ ಮೊದಲು ಕೂಡ್ರುವುದು ಬರೆಯುವ ಟೇಬಲ್ಲಿನ ಮೇಲೆಯೇ. ಆದರೆ, ಅವತ್ತು ಹಾಗಾಗಲಿಲ್ಲ. ಅಂದು ಮನೆಗೆ ಬಂದರೂ ಏನನ್ನೋ ಯೋಚಿಸುತ್ತ ಅಂಗಳದಲ್ಲಿಯೇ ಓಡಾಡುತ್ತಿದ್ದರು. ಅವರು ದಿನಾಲೂ ವಾಕಿಂಗ್ ಹೊರಡುವುದು ಹೊಸಗದ್ದೆಯ ರೋಡಿನಲ್ಲಿ. ಆಚೀಚೆ ಕುರುಚಲು ಗಿಡಗಳು, ಅಲ್ಲಲ್ಲಿ ನೇರಲ ಮರಗಳು, ಸಾಲುಸಾಲಾಗಿ ಕಟ್ಟಿಸಿದ ಕೆನರಾ ವೆಲ್‌ಫೇರ್ ಟ್ರಸ್ಟಿನ ಕ್ವಾಟ್ರರ್ಸ್‌ಗಳು, ಎಲ್ಲೆಂದರಲ್ಲಿ ಇರುವ ಮಾವಿನ ಮರಗಳಿಂದ ತುಂಬಿರುವ ರಸ್ತೆಯದು. ಅಲ್ಲೇ ಹತ್ತಿರದ ಪುರಲಕ್ಕಿಬೇಣದ ಮರಗಳಲ್ಲಿ ಯಾವಾಗಲೂ ಉದ್ದ ಬಾಲದ ಕಾಜಾಣದ ಜೊತೆಗೆ ಬೇರೆ ಬೇರೆ ಹಕ್ಕಿಗಳು ಮತ್ತೆ ಮತ್ತೆ ಕೂಗಿ ಕಾಡಿನ ವಾತಾವರಣ ಸೃಷ್ಟಿಸುತ್ತಿದ್ದವು. ಎಲ್ಲಿ ನೋಡಿದರಲ್ಲಿ ಮುಸುಕಿನ ಮಂಜು, ಯಶ್ವಂತರು ನಡೆಯುತ್ತಿದ್ದಂತೆ ಅದು ದೂರ ದೂರ ಹೋದಂತೆ, ಹಿಂತಿರುಗಿ ನೋಡಿದರೆ ಹತ್ತಿರ ಹತ್ತಿರವಾದಂತೆ ಭಾಸವಾಗುತ್ತಿತ್ತು. ತಣ್ಣನೆ ಬೀಸುವ ಗಾಳಿ ಬೇರೆ, ಈ ಕಾರಣಕ್ಕಾಗಿಯೇ ಯಶ್ವಂತರು ಕಪ್ಪಿಗೆ ವಾಕಿಂಗ್ ಹೋಗುವುದು. ಆ ರಸ್ತೆಯಲ್ಲಿ ನಸುಕಿನ ಐದು ಗಂಟೆಗೆ ಬೆಳಕಿರುವುದರಿಂದ ಯಾವುದೇ ಜಂತುಗಳ, ಪ್ರಾಣಿಗಳ ಭಯವಿರಲಿಲ್ಲ.

ಅವತ್ತು ಮಾತ್ರ ಹೊಸಗದ್ದೆ ಹತ್ತಿರದ ಹಸೆಹಳ್ಳದ ಮುರ್ಕಿಯಲ್ಲಿ ಇರುವ ಪನ್ನೇರಲು ಮರದ ಮೇಲೆ ಕೂತ ಕೋಗಿಲೆ ಪಂಚಮದಲ್ಲಿ ಕೂಗುತ್ತಿದ್ದಂತೆ, ಅವರ ಪ್ರೀತಿ ಪಾತ್ರ ಹೆಂಡತಿ ಸುಮನಾ ನೆನಪಾಗುತ್ತಾಳೆ. ಅದೇಕೋ ಕಣ್ಣಿನಲ್ಲಿ ಧಳಧಳ ನೀರು ಉಕ್ಕಲಾರಂಭಿಸುತ್ತದೆ. ಹೆಂಡತಿ ಸುಮನಾಳ ಮೇಲೆ ಅದೆಂತಹ ಪ್ರೀತಿ ಇತ್ತು ಅವರಿಗೆ. ಹಾಗಂತ ಅವಳನ್ನು ಪ್ರೀತಿಸಿ ಮದುವೆಯಾದದ್ದು ಅಲ್ಲ. ಸುಮನಾ ಕಾರವಾರದ ಮಾಜಾಳಿ ಕಡೆಯವಳು. ಯಾರೋ ಸಂಬಂಧಿಕರ ಮೂಲಕ ಪರಿಚಯವಾಗಿ ನೋಡಲು ಹೋದ ತಕ್ಷಣ ಮೊದಲ ನೋಟಕ್ಕೆ ಸೆಳೆದುಕೊಂಡಿದ್ದಳು. ಪ್ರಥಮ ದರ್ಶನದಲ್ಲಿಯೇ ಪ್ರೇಮ ಅಂತಾರಲ್ಲ ಅದು ಯಶ್ವಂತರ ಜೀವನದಲ್ಲೂ ಸತ್ಯ ಅನಿಸಿತ್ತು. ಅಲ್ಲಿ ಆರಂಭವಾದ ಆತ್ಯಂತಿಕ ಪ್ರೀತಿ ಈಗಲೂ ಅಷ್ಟೇ ಗಾಢವಾಗಿತ್ತು. ಅವರಿಬ್ಬರಿಗೂ ಮೂರು ಮಕ್ಕಳು. ಅವರು ಕೂಡ ಮದುವೆಯಾಗಿ ನೌಕರಿಯಲ್ಲಿದ್ದರು. ಒಂದು ವರ್ಷದ ಹಿಂದೆ ಸುಮನಾ ಸಾಯುವವರೆಗೂ ಕೂಡ ಅದೇ ಪ್ರೀತಿ ಜೀವಂತವಾಗಿತ್ತು.

ಸುಮನಾಳನ್ನು ಈಗಲೂ ಯಶ್ವಂತರಿಗೆ ಮರೆಯಲಾಗುತ್ತಿಲ್ಲ. ಏಕೆಂದರೆ ಸುಮನಾಳ ಪ್ರೀತಿಯೇ ಅಂತಹದ್ದು. ಆಗಲೇ ಬಿ.ಎ. ಓದಿದ್ದರೂ ಎಲ್ಲೂ ನೌಕರಿ ಮಾಡದೇ ಗಂಡ ಮಕ್ಕಳನ್ನು ನೋಡಿಕೊಳ್ಳುವ ಪಣ ತೊಟ್ಟಿದ್ದಳು. ಅವಳು ಮಾಡುವ ಅಡುಗೆ, ಕೆಲಸ, ಮಾತು, ಮನೆಗೆ ಬಂದವರಿಗೆ ಮಾಡುವ ಸತ್ಕಾರ ಎಲ್ಲವೂ ಅಚ್ಚುಕಟ್ಟು. ಸಾಹಿತ್ಯ ವಲಯದಲ್ಲೂ ಅವಳು ಸುಮನಕ್ಕ ಎಂದೇ ಕರೆಸಿಕೊಂಡಿದ್ದಳು. ಯಶ್ವಂತರು ಕುಮಟಾದ ಪ್ರತಿಷ್ಠಿತ ಕಾಲೇಜಿನಲ್ಲಿ ಬಯೋಕೆಮೆಸ್ಟ್ರಿ ಲೆಕ್ಚರರ್ ಆಗಿದ್ದರು. ಕರ್ನಾಟಕ ವಿವಿಯಲ್ಲಿ ಎಂ.ಎಸ್ಸಿ. ಮುಗಿಸುತ್ತಿದ್ದಂತೆಯೇ ಮುಂಬೈಗೆ ಹೋಗಿ ಎರಡು ವರ್ಷ ಕಂಪನಿಯಲ್ಲಿ ಕೆಲಸ ಮಾಡಿ, ಇದ್ಯಾಕೋ ಸರಿ ಹೋಗುತ್ತಿಲ್ಲ ಎಂದು ಪುನಃ ಕುಮಟಾಕ್ಕೆ ಬಂದಿದ್ದರು. ಅವರಿಗೆ ಬರೆಯುವ ಹುಚ್ಚು ಇದ್ದದ್ದು ಈಗಿನಿಂದ ಅಲ್ಲ. ಮೊದಮೊದಲಿಗೆ ಪ್ರೇಮಕವಿತೆಯನ್ನು ಬರೆಯುತ್ತಿದ್ದ ಅವರು, ನಂತರದಲ್ಲಿ ಕಥೆ–ಕಾದಂಬರಿಯತ್ತ ಹೊರಳಿದ್ದರು. ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಕಲಿಯುವಾಗ ಕಾರ್ಯಕ್ರಮಕ್ಕೆ ಬಂದ ಬೇಂದ್ರೆ, ಕುವೆಂಪು, ಮಾಸ್ತಿ ಮುಂತಾದವರ ಮಾತುಗಳನ್ನು ಕೇಳಿ ಆಕರ್ಷಿತರಾಗಿ ಸಾಹಿತ್ಯದ ಕಡೆಗೆ ಒಲವು ತೋರಿಸಿದ್ದರು. ಯಶ್ವಂತರ ಇಷ್ಟದ ಸಾಹಿತ್ಯ ಪ್ರಕಾರವೇ ಕಥೆ ಮತ್ತು ಕಾದಂಬರಿ. ಎರಡು ವರ್ಷ ಮುಂಬೈಯಲ್ಲಿರುವಾಗ ಬಾಂದ್ರಾದ ಸಮುದ್ರ ದಂಡೆಯಲ್ಲಿರುವ ಬಾಡಿಗೆ ಮನೆಯೊಂದರಲ್ಲಿದ್ದು, ಬೆಳಿಗ್ಗೆ ಐದು ಗಂಟೆಗೆ ಎದ್ದು ಕಿಟಕಿಯಲ್ಲಿ ಕಾಣುವ ಸಮುದ್ರದ ಅಲೆಗಳನ್ನು ನೋಡುತ್ತ ಕಥೆಗಳನ್ನು ಬರೆಯುತ್ತಿದ್ದರು. ಯಶ್ವಂತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ತಂದು ಕೊಟ್ಟ 'ಹೆಜ್ಜೆ ಮೂಡದ ಹಾದಿ' ಕಾದಂಬರಿಯ ಮೂಲ ವಸ್ತು, ಭಾಷೆ ಎಲ್ಲವೂ ಲುಕ್ಕೇರಿಯ ಹಾಲಕ್ಕಿಗಳದ್ದೇ ಆಗಿತ್ತು. ಅವರ ಭಾಷೆಯೇ ಅದ್ಭುತವಾಗಿರುತ್ತಿತ್ತು.

ಇಂದು ಕೂಡ ಕಥೆಯೊಂದು ಬರೆಯಲು ಹಸೆಹಳ್ಳದ ಮುರ್ಕಿಯಲ್ಲಿ ಕೂಗಿದ ಕೋಗಿಲೆ, ಕಥೆಯನ್ನು ಬರೆಯುವಂತೆ ಸ್ಫೂರ್ತಿಯೊಂದು ಮಿಂಚಿಸಿ ಹೋಗಿತ್ತು. ಬರೆಯಬೇಕು ಎಂದುಕೊಂಡು ಕುರ್ಚಿಯ ಮೇಲೆ ಕುಳಿತು ಆಲೋಚಿಸಿ, ಆಲೋಚಿಸಿ ಹೆಂಡತಿಯ ವಿಯೋಗದ ಕಥೆ ಬರೆಯಬೇಕೆಂದು ಮನಸ್ಸು ಹೇಳುತ್ತಿದ್ದರೂ ಯಾಕೋ ದೇಹ ಸಹಕರಿಸುತ್ತಿರಲಿಲ್ಲ. ಕಥೆಯ ಟೈಟಲ್ ಕೂಡ ವಿಯೋಗ ಎಂದು ಮನಸ್ಸಿನಲ್ಲಿ ಅಚ್ಚಾಗಿತ್ತು. ಯಶ್ವಂತರು ಯಾವಾಗಲೂ ಟೈಟಲ್ ಅನ್ನು ಮನಸ್ಸಿನಲ್ಲಿಟ್ಟುಕೊಂಡೇ ಕಥೆಗಳನ್ನು ಬರೆಯುವುದು ರೂಢಿ. ಅವರ 'ಹೆಜ್ಜೆ ಮೂಡದ ಹಾದಿ' ಕಾದಂಬರಿಯೂ ಹುಟ್ಟಿದ್ದು ಈ ಒಂದು ಶಬ್ದದಿಂದಲೇ. ಯಶ್ವಂತರ ಬಹಳಷ್ಟು ಕಥೆಗಳು ಸುಮನಾಳಿಗೆ ಅವರ ಅಪ್ಪ ಹೇಳಿದ ಮಾಜಾಳಿ ಕಡೆಯ ಕಥೆಯನ್ನು ಆಧರಿಸಿಯೇ ಬರೆದದ್ದು.

ಸುಮನಾಳಿಗೆ ಮೂರನೇ ಮಗಳು ಸುಲೋಚನಾ ಹುಟ್ಟುವ ಸಂದರ್ಭದಲ್ಲಂತೂ ಸುಮನಾ ಬದುಕುವ ಹಾಗೇ ಇರಲಿಲ್ಲ. ಆಗಲೇ ಯಶ್ವಂತರ ಜೀವ ಅರ್ಧಮರ್ಧವಾಗಿತ್ತು. ಎಂದೂ ದೇವರಲ್ಲಿ ಏನನ್ನೂ ಕೇಳದ ಅವರು ಅವತ್ತು ಮಾತ್ರ ಶಿರ ಬಾಗಿ ಭಗವಂತನಲ್ಲಿ ಹರಕೆ ಮಾಡಿಕೊಂಡಿದ್ದರು. ಸಂಸಾರದ ಸಂದರ್ಭದಲ್ಲಿ ಆಗಾಗ ತಡವಾಗಿ ಬರುವುದು, ಅಪರೂಪಕ್ಕೆ ಗುಂಡು ಹಾಕುವುದು, ಸಿಗರೇಟ್ ಆಗಾಗ ಸೇದುವುದು, ಯಾವಾಗ ನೋಡಿದರೂ ಏನನ್ನಾದರೂ ಓದುತ್ತ–ಬರೆಯುತ್ತ ಕೂಡ್ರುವುದು. ಇಂತಹ ಸಣ್ಣಪುಟ್ಟ ವಿಷಯಗಳಿಗೆ ಇಬ್ಬರಲ್ಲಿ ಜಗಳವಿದ್ದುದೇ ಬಿಟ್ಟರೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಮಕ್ಕಳು ಇಷ್ಟಪಟ್ಟ ಕಾಲೇಜು, ಆಯ್ದುಕೊಂಡ ವೃತ್ತಿಯ ಬಗ್ಗೆ ಇಬ್ಬರದೂ ಸಹಮತವಿತ್ತು. ಮೂವರು ಮಕ್ಕಳನ್ನು ಇಬ್ಬರೂ ಅಷ್ಟೇ ಪ್ರೀತಿಸುತ್ತಿದ್ದರು. ಮಕ್ಕಳು ಮಾತ್ರ ಅವರವರ ಸಂಸಾರ ಕಟ್ಟಿಕೊಂಡು ಬೆಂಗಳೂರಿನಲ್ಲೇ ನೆಲೆ ಕಂಡುಕೊಂಡಿದ್ದರು. ಎಲ್ಲರ ಮನೆಗೂ ಆಗಾಗ ಇಬ್ಬರೂ ಹೋಗಿ ಬರುತ್ತಿದ್ದರು.

ಯಶ್ವಂತರು ನಾಡಿನ ಕಥೆಗಾರರಲ್ಲಿ ಒಬ್ಬರಾಗಿರುವುದರಿಂದ ಸಾಹಿತ್ಯ ಸಂಭ್ರಮ, ಸಮ್ಮೇಳನ, ಕಥಾಗೋಷ್ಠಿ, ಪ್ರಶಸ್ತಿ ಅಂತ ಊರೂರು ತಿರುಗುವುದು ನಡೆದೇ ಇತ್ತು. ಅದೇಕೋ ನಿವೃತ್ತಿಯ ನಂತರ ಸುಮನಾಳ ಮೇಲಿನ ಪ್ರೀತಿ ಇನ್ನೂ ಇಮ್ಮಡಿಸಿತ್ತು. ಮದುವೆಯ ಹೊಸದರಲ್ಲಿನ ಬಾಂಧವ್ಯ ದೈಹಿಕ ಕಾಮನೆಯ ರೂಪದಲ್ಲಿದ್ದರೆ, ನಿವೃತ್ತಿಯ ನಂತರದ ಬಾಂಧವ್ಯ ಸ್ನೇಹದ ಆಪ್ತತೆಯಂತಿತ್ತು. ಯಶ್ವಂತರಿಗೆ ಸಣ್ಣ ಜ್ವರ ಬಂದರೆ ಅವಳದೇ ದರ್ಬಾರು, ಟಾಯ್ಲೆಟ್‌ಗೆ ಕರೆದುಕೊಂಡು ಹೋಗುವುದರಿಂದ ಹಿಡಿದು, ಸ್ನಾನ ಮಾಡಿಸಿ, ಚಹಾ ಕೊಟ್ಟು, ಬಿಪಿ ಶುಗರ್ ಗುಳಿಗೆ ನೆನಪು ಮಾಡಿ ನುಂಗಿಸಿ ಮಂಚದಲ್ಲಿ ಮಲಗಿಸಿ, ಚಾದರ ಹೊದಿಸಿ ಪ್ರೀತಿ ತೋರಿಸುತ್ತಿದ್ದಳು. ಒಮ್ಮೆ ತರಕಾರಿ, ದಿನಸಿ ತರಲು ಸ್ಕೂಟರ್ ಮೇಲೆ ಬೆಂಡಿಬಜಾರಿಗೆ ಹೋಗಿದ್ದಾಗ ಸ್ಕೂಟರ್ ಮೇಲೆ ಕುಳಿತಿದ್ದಾಳೆಂದು ಭ್ರಮಿಸಿ, ಸ್ಕೂಟರ್ ಚಾಲೂ ಮಾಡಿ ಮೂರ್ನಾಲ್ಕು ಬಾರಿ ಬಿಟ್ಟು ಬಂದದ್ದು ಇದೆ. ಸುಮನಾಳು ಸಾಯುವ ಮೊದಲು ಅವಳಿಗೆ ಮಲ್ಲಿಗೆ ಹೂವನ್ನು ತರುವುದನ್ನು ಬಿಟ್ಟಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಂತೂ ಅವಳ ಬಗೆಗಿನ ಬಾಂಧವ್ಯ ಯಶ್ವಂತರಲ್ಲಿ ತುಂಬಾ ಬೆಳೆದಿತ್ತು. ಅದಕ್ಕೆ ಕಾರಣವೇ ಅವಳು ತೋರಿಸುವ ಪ್ರೀತಿ, ಕಾಳಜಿ. ಯಶ್ವಂತರು ಮತ್ತು ಸುಮನಾ ಎಂತಹ ವ್ಯಕ್ತಿತ್ವದವರಾಗಿದ್ದರು ಎಂದರೆ, ಅವರ ಮನೆಯ ಹತ್ತಿರ ಅಥವಾ ಬಜಾರದಲ್ಲಿ ಯಾರಾದರೂ ಅರೆಹುಚ್ಚರು ಕಂಡರೆ ಅವರನ್ನು ಕರೆತಂದು ಸ್ನಾನ ಮಾಡಿಸಿ ಊಟ ಕೊಟ್ಟು, ಹೊಸಬಟ್ಟೆ ಹಾಕಿಸಿ ಕಳುಹಿಸುತ್ತಿದ್ದರು. ಬಡ ಮಕ್ಕಳು ಯಾರೇ ಕಲಿಯಲು ತೊಂದರೆ ಇದೆ ಎಂದು ಮನೆಗೆ ಬಂದರೆ ಕೈಲಾದ ಸಹಾಯ ಮಾಡುತ್ತಿದ್ದರು. ಕೊರೊನಾ ಕಾಲದಲ್ಲಂತೂ ಬಡ ಗುಡಿಸಲುಗಳಿಗೆ ಗೆಳೆಯರ ಜೊತೆ ಸೇರಿ ಅಕ್ಕಿ ಮತ್ತು ದಿನಸಿ ಮೂಟೆಗಳನ್ನು ಕೊಟ್ಟಿದ್ದು ಇದೆ.

ಅವತ್ತು ಬೆಳಿಗ್ಗೆ ಎಂಟಾದರೂ ಅಂಗಳದಲ್ಲಿಯೇ ನಿಂತಿದ್ದ ಯಶ್ವಂತರು ಏನು ಮಾಡಿದರೂ ಮನೆಯ ಒಳಗೆ ಹೋಗುತ್ತಿಲ್ಲ. ಸುಮನಾ ಹೋಗಿ ವರ್ಷವಾಯಿತು. ಇಷ್ಟು ದಿನ ಈ ರೀತಿ ನೆನಪಾಗಿರಲಿಲ್ಲ? ಯಾಕೆ ಹೀಗೆ? ಇಂದು ಸುಮನಾಳ ಹುಟ್ಟಿದ ದಿನ ಎಂಬುದು ಯಶ್ವಂತರಿಗೆ ಕೊನೆಗೂ ನೆನಪಾಯಿತು. ಪ್ರತಿ ಹುಟ್ಟುಹಬ್ಬಕ್ಕೆ ಒಂದು ಸೀರೆ ಮತ್ತು ಮಲ್ಲಿಗೆ ಹೂವು ತರುತ್ತಿದ್ದ ಯಶ್ವಂತರಿಗೆ ಇಂದು ಅವಳ ಹುಟ್ಟಿದ ಹಬ್ಬ ಅವರಿಗೆ ತೀವ್ರವಾಗಿ ಕಾಡಿತು. ಇದೇ ದಿನಕ್ಕೆ ಅವಳು ಅಗಲಿದ ಕಾರಣ ತಾನು ಅನುಭವಿಸಿದ ಏಕಾಂಗಿತನ, ಹಸಿವಾಗದ ದಿನಗಳು, ನೆನಪಾಗದ ಗುಳಿಗೆಗಳು, ಊಟ, ಸ್ನಾನ, ನಿದ್ರೆ ಇಷ್ಟೇ ಬಿಟ್ಟರೆ

